# ವಿಕ ಡೈಲಿ ಡಾಕ್ಟರ್



**ಡಾ.ಸಿ.ಎನ್.ಮಂಜುನಾಥ್**
ಮುಖ್ಯಸ್ಥರು, ಜಯದೇವ ಹೃದ್ರೋಗ ವಿಜ್ಞಾನ, ಸಂಶೋಧನಾ ಸಂಸ್ಥೆ.



## ಆಗಾಗ ಎದೆ ನೋವು ಕಾಣಿಸ್ತಿದೆ ಸ್ಟೆಂಟ್ ಹಾಕಿಸಿ ಕೊಳ್ಳಲೇಬೇಕಾ?

**ಪ್ರಶ್ನೆ:** ನನಗೆ 57 ವರ್ಷ. ರಕ್ತದೊತ್ತಡ ಹಾಗೂ ಸಕ್ಕರೆ ಕಾಯಿಲೆ ಇದೆ. ಸಣ್ಣವ್ಯಾಪಾರ ನಡೆಸುತ್ತಿದ್ದೇನೆ. ನನಗೆ ಆಗಾಗ ಎದೆನೋವು ಕಾಣಿಸಿಕೊಳ್ಳುತ್ತದೆ. ಸ್ಥಳೀಯ ಕ್ಲಿನಿಕ್‌ನಲ್ಲಿ ವೈದ್ಯರ ಬಳಿ ತಪಾಸಣೆ ಮಾಡಿಸಿದ್ದೇನೆ. ನಿಮಗೆ ಸ್ಟೆಂಟ್ ಹಾಕಬೇಕಾಗಬಹುದು. ಒಳ್ಳೆಯ ಆಸ್ಪತ್ರೆಗೆ ತೋರಿಸಿ ಎಂದು ಸಲಹೆ ನೀಡಿದ್ದಾರೆ. ನನಗೆ ಮುಂದೇನು ಮಾಡಬೇಕು ಎಂಬ ಗೊಂದಲದಲ್ಲಿ ಇದ್ದೇನೆ. ನೀವೇ ನನಗೆ ಮಾರ್ಗದರ್ಶನ ಮಾಡಿ.

– **ಅಪ್ಪಣ್ಣ**, ಮಧುಗಿರಿ

**ಉತ್ತರ:** ಸಾಮಾನ್ಯವಾಗಿ ಎದೆನೋವು ಎರಡು ರೀತಿಯಲ್ಲಿ ಬರುತ್ತದೆ. ನಡೆಯುವಾಗ, ಮೆಟ್ಟಿಲು ಏರುವಾಗ ಹಾಗೂ ಗುಡ್ಡ ಹತ್ತುವಾಗ ಎದೆನೋವು ಬಂದರೆ ಹೃದ್ರೋಗ ಸಮಸ್ಯೆ ಇದೆ ಎಂದು ಅರ್ಥ. ಅದೇ ಕುಳಿತಿರುವಾಗ, ಮಲಗಿರುವಾಗ ಎದೆನೋವು ಕಾಣಿಸಿಕೊಂಡರೆ ಅದು ಹೃದಯಕ್ಕೆ ಸಂಬಂಧಿಸಿದ್ದಲ್ಲ. ನಿಮಗೆ ಯಾವ ಮಾದರಿಯ ಎದೆನೋವು ಎಂದು ತಿಳಿದರೆ ಹೃದ್ರೋಗ ಇದೆಯೇ ಇಲ್ಲವೇ ಎಂಬುದು ತಿಳಿಯಬಹುದು. ಇದಕ್ಕೆ ನೀವು ತಕ್ಷಣವೇ ಸಮೀಪದ ಉತ್ತಮ ಆಸ್ಪತ್ರೆಗೆ ತೆರಳಿ ಕೆಲವು ಟೆಸ್ಟ್‌ಗಳನ್ನು ಮಾಡಿಸಬೇಕು. ಪ್ರಮುಖವಾಗಿ ಟ್ರೆಡ್‌ಮಿಲ್ ಇಸಿಜಿ ಮಾಡಿಸಬೇಕು. ಆಗ ನಿಮಗೆ ಹೃದಯ ಸಂಬಂಧಿ ಸಮಸ್ಯೆ ಇದ್ದರೆ ಗೊತ್ತಾಗುತ್ತದೆ. ನಂತರ ಆಂಜಿಯೋಗ್ರಾಮ್ ಮಾಡಿಸಬೇಕಾಗುತ್ತದೆ. ಆಮೇಲೆ ನಿಮ್ಮ ಸಮಸ್ಯೆ ಏನೆಂಬುದು ತಿಳಿದು ಸ್ಟೆಂಟ್ ಹಾಕಬೇಕೇ, ಬೇಡವೇ ಎಂಬುದನ್ನು ನಿರ್ಧರಿಸಬಹುದು. ಏಕಾಏಕಿ ಸ್ಟೆಂಟ್ ಹಾಕಿಸಿಕೊಳ್ಳುವ ಅಗತ್ಯವಿಲ್ಲ. ಒಳ್ಳೆಯ ಹೃದ್ರೋಗ ತಜ್ಞರ ಬಳಿ ತೋರಿಸಿ ಚಿಕಿತ್ಸೆ ಪಡೆದುಕೊಳ್ಳಿ.



### ನೀವೂ ಪ್ರಶ್ನೆ ಕೇಳಿ...

**ವಿಕ ಡೈಲಿ ಡಾಕ್ಟರ್** ಅಂಕಣದ ಮೂಲಕ ಪ್ರತಿದಿನ ಆರೋಗ್ಯ ಸಂಬಂಧಿತ ಪ್ರಶ್ನೆಗಳನ್ನು ಕೇಳಿ ತಜ್ಞ ವೈದ್ಯರಿಂದ ಪರಿಹಾರ ಪಡೆದುಕೊಳ್ಳಬಹುದು.

ವಾಟ್ಸ್‌ಆ್ಯಪ್: 7899578866